RNU AIR DHARWAD

JUNE 24, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**371 ಜೆ ತಿದ್ದುಪಡಿ: ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ನಾಂದಿ –ಮುಖ್ಯಮಂತ್ರಿ ಸಿದ್ದರಾಮಯ್ಯ.**

**ರಾಜ್ಯಾದ್ಯಂತ, ಜುಲೈ 15 ರಿಂದ, ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಇ–ಖಾತೆ ಅಭಿಯಾನ.**

**ಪೊಲೀಸ್ ಇಲಾಖೆ ಬಲವರ್ಧನೆಗೆ, ರಾಜ್ಯ ಗೃಹ ಇಲಾಖೆಯಿಂದ, ವಿಶೇಷ ಕ್ರಮ.**

**ಕೇಂದ್ರ ಪುರಸ್ಕೃತ ಮುದ್ರಾ ಯೋಜನೆ; ಉತ್ತರಕನ್ನಡ ಜಿಲ್ಲೆಯಲ್ಲಿ, 22 ಸಾವಿರದ 412 ಜನ ಫಲಾನುಭವಿಗಳು.**

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಾದೇಶಿಕವಾಗಿ ಹಿಂದುಳಿದ, ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳ, ಸಮಗ್ರ ಅಭಿವೃದ್ಧಿಗೆ 371 ಜೆ ಕಲಂಗೆ ತಿದ್ದುಪಡಿ ಮಾಡಿ, ಹತ್ತು ವರ್ಷಗಳು ಪೂರ್ಣಗೊಂಡಿವೆ; ಈ ಭಾಗದ ಯುವಜನತೆ, ಶೈಕ್ಷಣಿಕವಾಗಿ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ, ಪ್ರಗತಿ ಸಾಧಿಸಲು ಪ್ರೋತ್ಸಾಹ ಸಿಕ್ಕಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ರಾಯಚೂರಿನ, ಯರಗೇರಾದಲ್ಲಿ 936 ಕೋಟಿ ರೂಪಾಯಿ ವೆಚ್ಚದ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ, ಬುಡಕಟ್ಟು ಸಾಂಸ್ಕೃತಿಕ ಉತ್ಸವಕ್ಕೆ, ಚಾಲನೆ ನೀಡಿ, ಮಾತನಾಡಿದರು. ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ, ಡಾಕ್ಟರ್ ಡಿ.ಎಂ. ನಂಜುಂಡಪ್ಪ ವರದಿ ಶಿಫಾರಸು ಆಧರಿಸಿ, ಈ ವರೆಗೆ, 13 ಸಾವಿರದ 500 ಕೋಟಿ ರೂಪಾಯಿ, ವಿಶೇಷ ಅನುದಾನ ಒದಗಿಸಲಾಗಿದೆ ಎಂದರು. ಇದಕ್ಕೂ ಮೊದಲು, ಆದಿ ಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ನಾಮಕರಣ ನೆರವೇರಿಸಿದ ಮುಖ್ಯಮಂತ್ರಿಯವರು, ಮಹರ್ಷಿ ವಾಲ್ಮೀಕಿ ಉದ್ಯಾನ ಹಾಗೂ ಕಂಚಿನ ಪುತ್ಥಳಿ ಅನಾವರಣಗೊಳಿಸಿದರು. ಕಲ್ಯಾಣ ಕರ್ನಾಟಕದ, ಮಾನವ ಜಿನೋಮ್ ಅಧ್ಯಯನ ಸಂಸ್ಥೆಯ, ಶಂಕುಸ್ಥಾಪನೆ ಸಹ ನೆರವೇರಿಸಿದರು.**

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಹೊಸ ದಿಲ್ಲಿ ತಲುಪಿದ್ದಾರೆ. ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, 5 ಪ್ರಮುಖ ಮಸೂದೆಗಳಿಗೆ, ಅಂಗೀಕಾರ ನೀಡುವಂತೆ, ಅವರು ಮನವಿ ಮಾಡಲಿದ್ದಾರೆ ಎಂದು, ಉನ್ನತ ಮೂಲಗಳು ತಿಳಿಸಿವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್ ಅವರನ್ನು ಸಹ, ಮುಖ್ಯಮಂತ್ರಿ ಅವರು ಭೇಟಿ ಮಾಡಿ, ಕರ್ನಾಟಕ ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ, ನೆರವು ಕೋರಲಿದ್ದಾರೆ ಎಂದು, ಅವರ ಅಧಿಕೃತ ಪ್ರವಾಸ ಕಾರ್ಯಕ್ರಮ ಪಟ್ಟಿ ತಿಳಿಸಿದೆ. ಭದ್ರಾ ಮೇಲ್ದಂಡೆ ಯೋಜನೆ ಸೇರಿದಂತೆ, ರಾಜ್ಯದ ವಿವಿಧ ನೀರಾವರಿ ಯೋಜನೆಗಳಿಗೆ, ಹೆಚ್ಚಿನ ಅನುದಾನ ಬಿಡುಗಡೆ ಮಾಡುವಂತೆ, ಕೇಂದ್ರದ ಜಲಶಕ್ತಿ ಖಾತೆ ಸಚಿವರನ್ನು ಕೋರುವುದಾಗಿ, ಮುಖ್ಯಮಂತ್ರಿ ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ಧ್ವನಿ: ಮುಖ್ಯಮಂತ್ರಿ ಸಿದ್ದರಾಮಯ್ಯ 30 ಸೆಕೆಂದುಗಳು

<><><>

ಪೊಲೀಸ್ ಇಲಾಖೆಯ, ಸಾವಿರ ಪೊಲೀಸ್ ಉಪ ನಿರೀಕ್ಷಕರ ಹುದ್ದೆಗಳನ್ನು, ಹಂತಹಂತವಾಗಿ ಭರ್ತಿ ಮಾಡಲು, ಕ್ರಮ ಕೈಗೊಳ್ಳಲಾಗಿದೆ; ಈಗಾಗಲೇ 500 ಹುದ್ದೆಗಳಿಗೆ ನೇಮಕಗೊಂಡ ಸಿಬ್ಬಂದಿ ತರಬೇತಿ ನಿರತರಾಗಿದ್ದಾರೆ ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ. ಬಾಗಲಕೋಟೆಯ, ನವನಗರದಲ್ಲಿ, ನೂತನ ಪೊಲೀಸ್ ಕೌಶಲ ಅಭಿವೃದ್ಧಿ ಕೇಂದ್ರ –ಧಾತ್ರಿ ಭವನ ಹಾಗೂ ಉತ್ಕರ್ಷ ಪೊಲೀಸ್ ನಿವಾಸಗಳನ್ನು, ಉದ್ಘಾಟಿಸಿ ಅವರು ಮಾತನಾಡಿದರು. ಬಳಿಕ ಸುದ್ದಿಗೋಷ್ಠಿ ನಡೆಸಿದ ಸಚಿವರು, ನೂತನ ಪೊಲೀಸ್ ಠಾಣೆಗಳ ನಿರ್ಮಾಣಕ್ಕೆ, ಮುಂಬರುವ ಮುಂಗಡಪತ್ರದಲ್ಲಿ, ಅನುದಾನ ಮೀಸಲಿಡಲಾಗುವುದು ಎಂದರು.

<><><>

ರಾಜ್ಯದ ಗ್ರಾಮ ಪಂಚಾಯ್ತಿಗಳ ಹಂತದಲ್ಲಿ, ಬರುವ ಜುಲೈ 15ರಿಂದ, ಸಾರ್ವಜನಿಕರ ಆಸ್ತಿಗಳ, ಇ–ಖಾತೆ ರೂಪಿಸುವ ಅಭಿಯಾನವನ್ನು, ಕಂದಾಯ ಇಲಾಖೆ ಆಯೋಜಿಸಲಿದೆ ಎಂದು, ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ತುಮಕೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಜರುಗಿದ, ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮ ಪಂಚಾಯಿತಿಗಳಲ್ಲಿ ಇ–ಖಾತೆ ಕಡ್ಡಾಯ ಗೊಳಿಸಲಾಗುತ್ತಿದ್ದು, ಖಾಸಗಿ ಬಡಾವಣೆಗಳಲ್ಲಿ ನಿರ್ಮಿಸಲಾದ ನಿವೇಶನಗಳ ಖರೀದಿ ಪತ್ರವಿದ್ದರೆ ಮಾತ್ರ, ಬಿ–ಖಾತೆ ನೀಡಲು ಅವಕಾಶವಿದೆ ಎಂದು, ಸಚಿವರು ಸ್ಪಷ್ಟ ಪಡಿಸಿದರು.

<><><>

ಕೇಂದ್ರ ಪುರಸ್ಕೃತ, ಮುದ್ರಾ ಯೋಜನೆಯಡಿ, ಉತ್ತರಕನ್ನಡ ಜಿಲ್ಲೆಯಲ್ಲಿ, 22 ಸಾವಿರದ 412 ಜನ ಫಲಾನುಭವಿಗಳು, ಸಾಲ ಪಡೆದು, ಸ್ವಯಂ ಉದ್ಯೋಗ ಕಂಡುಕೊಂಡು, ಸ್ವಾವಲಂಬಿಗಳಾಗಿದ್ದಾರೆ ಎಂದು, ಸಂಸದ ವಿಶ್ವೇಶ್ವರ ಹೆಗಡೆ, ಕಾಗೇರಿ ತಿಳಿಸಿದ್ದಾರೆ. ಕಾರವಾರದಲ್ಲಿ ಮಾತನಾಡಿದ ಅವರು, ಉತ್ತರಕನ್ನಡ ಜಿಲ್ಲೆಯಲ್ಲಿ, 8 ಸಾವಿರದ 510 ಜನ ಸ್ವ ನಿಧಿ ಯೋಜನೆಯ, ಲಾಭ ಪಡೆದಿದ್ದಾರೆ ಎಂದರು. ಜನ ಧನ ಹಾಗೂ ಪ್ರಧಾನಮಂತ್ರಿ ಸುರಕ್ಷಾ ವಿಮೆ ಯೋಜನೆ ಸೇರಿದಂತೆ, ಕೇಂದ್ರ ಸರ್ಕಾರದ ಹಲವು ಜನಪರ ಯೋಜನೆಗಳನ್ನು, ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿವೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲೂಕಿನ ಮಣ್ಣೆ ಗ್ರಾಮದ ಐತಿಹಾಸಿಕ ಕುರುಹುಗಳನ್ನು, ರಾಜ್ಯದ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸಲು, ಪ್ರವಾಸೋದ್ಯಮ ಇಲಾಖೆ ನಿರ್ಧರಿಸಿದೆ. ಮಣ್ಣೆ ಗ್ರಾಮದ, ಶ್ರೀ ಕಪಿಲೇಶ್ವರ ದೇವಾಲಯ, ಅಕ್ಕ ತಂಗಿ ಗುಡಿ, ಶ್ರೀ ಸೋಮೇಶ್ವರ ದೇವಾಲಯ, ಬಸದಿ, ಶಾಸನಗಳು, ವೀರಗಲ್ಲುಗಳು, ಗರುಡ ವಿಗ್ರಹ ಮತ್ತು ಶ್ರೀ ಸಪ್ತ ಮಾತೃಕೆ ದೇವಾಲಯಗಳನ್ನು ಒಳಗೊಂಡ, ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ತಿಳಿಸಿದ್ದಾರೆ.

<><><>

ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕು, ಹಿರೇ ಬೆಣಕಲ್ಲಿನ, ಮೊರೇರ ಬೆಟ್ಟಗಳನ್ನು, ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲು, ಪ್ರವಾಸೋದ್ಯಮ ಇಲಾಖೆ ಪ್ರಸ್ತಾವ ಸಲ್ಲಿಸಲು ಯೋಜಿಸಿದೆ. ಹಿರೇ ಬೆಣಕಲ್, ಪ್ರಾಗ್ ಐತಿಹಾಸಿಕ ಸ್ಥಳವಾಗಿದ್ದು, 6 ಸಾವಿರ ವರ್ಷಗಳ ಇತಿಹಾಸ ಹೊಂದಿದೆ ಎಂದು, ಅಂದಾಜಿಸಲಾಗಿದೆ. ಮೇಘಾಲಯ ಹೊರತು ಪಡಿಸಿ, ಆದಿಮಾನವರು ವಾಸವಾಗಿದ್ದ, ಕುರುಹು ಪತ್ತೆಯಾದ ಖ್ಯಾತಿ ಹೊಂದಿದೆ. ಪ್ರದೇಶ ಸಮಾಚಾರಕ್ಕಾಗಿ ಬೆಂಗಳೂರಿನ ಇಂಟ್ಯಾಕ್ ಸಂಸ್ಥೆಯ, ಸಹ ಸಂಯೋಜಕ, ಅರವಿಂದ, ಮಾಹಿತಿ ನೀಡಿದ್ದಾರೆ.

<><><>

ಧ್ವನಿ: ಅರವಿಂದ 34 ಸೆಕೆಂದುಗಳು

<><><>

ರೈತರು ಏಕ ಬೆಳೆಗಿಂತ ಮಿಶ್ರ ಬೆಳೆಗಳನ್ನು ಆಶ್ರಯಿಸಿ, ಕೃಷಿ ಕೈಗೊಳ್ಳಲು ಆದ್ಯತೆ ನೀಡುವಂತೆ, ಧಾರವಾಡ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ – 'ವಾಲ್ಮಿ' ನಿರ್ದೇಶಕ ಎಸ್.ಗಿರೀಶ ಕೋರಿದ್ದಾರೆ. ಬಳ್ಳಾರಿ ಜಿಲ್ಲೆ, ಕುರುಗೋಡು ತಾಲೂಕು, ದಮ್ಮೂರು ಗ್ರಾಮದ, ಶ್ರೀ ವೆಂಕಾವಧೂತ ಮಠದ ಸಭಾಂಗಣದಲ್ಲಿ, ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರಿಗೆ ಆಯೋಜಿಸಿದ್ದ, ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ರೈತರು ಕಾಲ ಕಾಲಕ್ಕೆ ತಮ್ಮ ಜಮೀನುಗಳ ಮಣ್ಣು ಪರೀಕ್ಷೆ ಮಾಡಿಸಿ, ಸೂಕ್ತ ಪೋಷಕಾಂಶಗಳನ್ನು ಪೂರೈಸಬೇಕು. ದ್ವಿದಳ ಧಾನ್ಯಗಳನ್ನು ಬೆಳೆಯಬೇಕು. ಧಾನ್ಯಗಳ ಬೇರಿನಲ್ಲಿರುವ ರೈಜೋಬಿಯಂ ಗಂಟುಗಳ ಮೂಲಕ, ಸಾರಜನಕ ಸ್ಥಿರೀಕರಣಗೊಂಡು, ಮಣ್ಣಿನ ಫಲವತ್ತತೆ ಹೆಚ್ಚುತ್ತದೆ. ಉತ್ತಮ ಇಳುವರಿ ಪಡೆಯಲು ಸಾಧ್ಯವಿದೆ ಎಂದರು.

<><><>

ಬಂಜಾರಾ ಸಮುದಾಯದ, ಲಂಬಾಣಿಗರ ಸಂಸ್ಕೃತಿ ಕೋಶ, ಬಂಜಾರಾ ಸಾಮಾಜಿಕ ಚಿಂತಕರ ಕುರಿತು, 70 ಕೃತಿಗಳ ರಚನೆ ಹಾಗೂ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ, ಯೋಜಿಸಲಾಗಿದೆ ಎಂದು, ಬಂಜಾರಾ ಅಕಾದೆಮಿ ಅಧ್ಯಕ್ಷ, ಎ.ಆರ್ ಗೋವಿಂದಸ್ವಾಮಿ ತಿಳಿಸಿದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲೂಕು, ಹಾರೋಹಳ್ಳಿ ಹೋಬಳಿಯ, ಲೋಕನಾಯ್ಕನ ತಾಂಡಾದಲ್ಲಿ ಆಯೋಜಿಸಿದ್ದ, "ಬಂಜಾರ ಅಕಾದೆಮಿ ನಡೆ, ತಾಂಡಾಗಳ ಕಡೆ" ಅಭಿಯಾನಕ್ಕೆ ಚಾಲನೆ ನೀಡಿ, ಮಾತನಾಡಿದರು.

<><><>

ರಾಜ್ಯದ ಕೆಲವೆಡೆ ಮಳೆ ಮುಂದುವರೆದಿದೆ. ಕೊಡಗು ಜಿಲ್ಲೆಯ ವಿವಿಧೆಡೆ ಗಾಳಿ ಸಹಿತ, ರಭಸದ ಮಳೆಯಾಗುತ್ತಿದೆ. ಹವಾಮಾನ ಇಲಾಖೆ ಮುನ್ಸೂಚನೆಯಂತೆ, ಕೊಡಗು ಜಿಲ್ಲೆಗೆ, ಇಂದು ಆರೇಂಜ್ ಅಲರ್ಟ್ ಪ್ರಕಟಿಸಲಾಗಿದೆ. ಸುಂಟಿಕೊಪ್ಪ ಹೋಬಳಿಯ, ಕಾನಬೈಲು, ಬೈಚನಹಳ್ಳಿ ಗ್ರಾಮದಲ್ಲಿ, ಮಳೆಯಿಂದ ಗುರುವ ಅವರ ಮನೆ ಗೋಡೆ ಕುಸಿದಿದೆ. ಮಡಿಕೇರಿ ತಾಲೂಕು ಕಾಟಕೇರಿ ಗ್ರಾಮದ, ಅಶ್ವತ್ಥ ಭಟ್ ಅವರ ಮನೆ ಗೋಡೆ ಕುಸಿದು ಹಾನಿಯಾಗಿದೆ. ಕಗ್ಗೋಡ್ಲುವಿನಲ್ಲಿ ಮುಖ್ಯ ರಸ್ತೆಗೆ ಮರ ಬಿದ್ದ ಪರಿಣಾಮ, ವಾಹನಗಳ ಸಂಚಾರಕ್ಕೆ ತಡೆಯಾಗಿದೆ.ಜಿಲ್ಲೆಯಾದ್ಯಂತ 99 ಮಿಲ್ಲಿ ಮೀಟರ್ ಮಳೆ ದಾಖಲಾಗಿದೆ. ಹಾರಂಗಿ ಅಣೆಕಟ್ಟೆಗೆ 5 ಸಾವಿರದ 266 ಕ್ಯೂಸೆಕ್ ನಷ್ಟು ಒಳಹರಿವಿದೆ. ಕಾವೇರಿ ನದಿ ಜಲಾನಯನ ಪ್ರದೇಶದಲ್ಲಿ, ವ್ಯಾಪಕ ಮಳೆಯಾಗುತ್ತಿದೆ. ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ, ಕೃಷ್ಣರಾಜ ಸಾಗರ ಅಣೆಕಟ್ಟೆ ಭಾಗಶ: ಭರ್ತಿಯಾಗಿದೆ. ಒಳ ಹರಿವು ಹೆಚ್ಚಿದ ಹಿನ್ನೆಲೆ, ನದಿಗೆ ನೀರು ಹರಿ ಬಿಡಲಾಗಿದ್ದು, ನದಿ ಪಾತ್ರದ ಜನ, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ, ಶ್ರೀರಂಗಪಟ್ಟಣ ತಾಲೂಕು ಆಡಳಿತ, ಕಟ್ಟುನಿಟ್ಟಿನ ಸೂಚನೆ ನೀಡಿದೆ. ಹಾಸನ ಜಿಲ್ಲೆಯಲ್ಲಿ, ಮಳೆಯಿಂದಾದ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳ ಹಾನಿ ಪರಿಶೀಲಿಸಿ, ವರದಿ ನೀಡುವಂತೆ, ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ, ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ನಿರ್ದೇಶಿಸಿದ್ದಾರೆ.

<><><>

ಪರಿಶಿ ್ಟ ಜಾತಿಗಳ ಸಮಗ್ರ ಸಮೀಕ್ಷೆ–2025ಕ್ಕೆ ಸಂಬಂಧಿಸಿ, ಇಲ್ಲಿಯ ವರೆಗೆ, ಹೆಸರು ನೊಂದಾಯಿಸದವರು, ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ, ಈ ತಿಂಗಳ 30ರ ವರೆಗೆ, ಮಾಹಿತಿ ನೀಡಲು, ಅವಕಾಶವಿದೆ ಎಂದು, ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಎ.ಬಿ. ಬಸವರಾಜು ತಿಳಿಸಿದ್ದಾರೆ. ಕರ್ನಾಟಕ ಒನ್, ಗ್ರಾಮ ಒನ್, ಬೆಂಗಳೂರು ಒನ್ ಹಾಗೂ ಬಾಪೂಜಿ ಸೇವಾ ಕೇಂದ್ರಗಳಲ್ಲಿಯೂ, ಪರಿಶಿಷ್ಟ ಸಮುದಾಯದ ಬಂಧುಗಳು, ಮಾಹಿತಿ ನೀಡಬಹುದು ಎಂದು, ಅವರು ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮೊತ್ತೊಮ್ಮೆ ಮುಖ್ಯಾಂಶಗಳು:

371 ಜೆ ತಿದ್ದುಪಡಿ: ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ನಾಂದಿ –ಮುಖ್ಯಮಂತ್ರಿ ಸಿದ್ದರಾಮಯ್ಯ.

ರಾಜ್ಯಾದ್ಯಂತ, ಜುಲೈ 15 ರಿಂದ, ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಇ–ಖಾತೆ ಅಭಿಯಾನ.

ಪೊಲೀಸ್ ಇಲಾಖೆ ಬಲವರ್ಧನೆಗೆ, ರಾಜ್ಯ ಗೃಹ ಇಲಾಖೆಯಿಂದ, ವಿಶೇಷ ಕ್ರಮ.

ಕೇಂದ್ರ ಪುರಸ್ಕೃತ ಮುದ್ರಾ ಯೋಜನೆ; ಉತ್ತರಕನ್ನಡ ಜಿಲ್ಲೆಯಲ್ಲಿ, 22 ಸಾವಿರದ 412 ಜನ ಫಲಾನುಭವಿಗಳು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ